# ಅಖಾಡಕ್ಕಿಳಿದ ಮೇಲೆ ಗೆಲ್ಲಲೇಬೇಕು

‘ಅಮರ್’ ಸಿನಿಮಾ ನಂತರ ಮೂರು ಚಿತ್ರಗಳಲ್ಲಿ ನಟಿಸುತ್ತಿರುವ ನಟ ಅಭಿಷೇಕ್ ಅಂಬರೀಶ್, ತಮ್ಮ ಮೊದಲ ಸಿನಿಮಾ ಕೊಟ್ಟ ಅನುಭವಗಳಿಂದ ಮತ್ತಷ್ಟು ಪಕ್ವವಾಗಿದ್ದಾರಂತೆ. ಸಿನಿಮಾ ಅಖಾಡಕ್ಕಿಳಿದ ಮೇಲೆ ಗೆಲ್ಲಲೇಬೇಕೆಂಬ ಹಟದೊಂದಿಗೆ ಮುಂದಡಿ ಇಟ್ಟಿದ್ದಾರೆ...

■ ಸುಮಲತಾ ಎನ್.



‘ಅಮರ್’ ಸಿನಿಮಾ ನಂತರ, ಮೂರು ವರ್ಷಗಳ ಅಂತರದಲ್ಲಿ ಇದೀಗ ನಟ ಅಭಿಷೇಕ್ ಅಂಬರೀಶ್ ನಟನೆಯ ಮೂರು ಸಿನಿಮಾಗಳು ತೆರೆಗೆ ಸಜ್ಜಾಗುತ್ತಿವೆ. ‘ಬ್ಯಾಡ್ ಮ್ಯಾನರ್ಸ್’, ‘ಕಾಳಿ’, ಇನ್ನೂ ಹೆಸರಿಡದ ‘ಎಎ04 ಪ್ರಾಜೆಕ್ಟ್’ ಸಿನಿಮಾಗಳು ತಯಾರಾಗುತ್ತಿದ್ದು, ಈ ಸಿನಿಮಾಗಳ ಕುರಿತು, ತಮ್ಮ ಚಿತ್ರಗಳ ಅನುಭವಗಳ ಕುರಿತು ನಟ ಅಭಿಷೇಕ್ ‘ಸುಧಾ’ ಜೊತೆಗೆ ಮಾತಿಗಿಳಿದರು.

ಯಾವುದೇ ವಿಷಯದಲ್ಲಾಗಲೀ, ಏನೇ ತರಬೇತಿ, ಕಲಿಕೆ ಪಡೆದುಕೊಂಡಿದ್ದರೂ ಪ್ರಾಯೋಗಿಕ ಅನುಭವವೇ ಅತಿ ಮುಖ್ಯ ಎಂಬ ಪಾಠವನ್ನು ತಮ್ಮ ಮೊದಲ ಸಿನಿಮಾದ ಸಂದರ್ಭದಲ್ಲೇ ಕಲಿತಿರುವುದಾಗಿ ಹೇಳುತ್ತಾರೆ ಅಭಿಷೇಕ್. ‘ಅಮರ್’ ಸಿನಿಮಾ ನನಗೆ ಹಲವು ಪಾಠಗಳನ್ನು ಹೇಳಿಕೊಟ್ಟಿತು. ಚಿತ್ರರಂಗ ಅಂದರೆ ಏನು, ಎತ್ತ ಎಂದು ತಿಳಿದಿದ್ದೇ ಈ ಸಿನಿಮಾದಿಂದ. ಸಿನಿಮಾ ರಂಗದ ಕುರಿತು ಒಂದು ಸ್ಥೂಲ ಪರಿಚಯವಾಗಿದ್ದು ಆಗಿನ ದಿನಗಳಲ್ಲೇ. ಇಲ್ಲಿ ಏನು ಮಾಡಬೇಕು, ಏನು ಮಾಡಬಾರದು, ಜನ ಏನನ್ನು ಇಷ್ಟಪಡುತ್ತಾರೆ, ಏನನ್ನು ಇಷ್ಟಪಡುವುದಿಲ್ಲ, ಅವರ ನಿರೀಕ್ಷೆಗಳೇನು, ನಾನು ಹೇಗಿರಬೇಕು... ಹೀಗೆ ಒಬ್ಬ ನಟನಿಗಿರಬೇಕಾದ ಮೂಲ ತಿಳಿವಳಿಕೆಗಳಿಗೆ ಮೊದಲ ಸಿನಿಮಾ ಅಡಿಪಾಯವಾಯಿತು’ ಎಂದು ವಿವರಿಸುತ್ತಾರೆ.

ಮೊದಲ ಸಿನಿಮಾ ತೆರೆಕಂಡು ಸುಮಾರು ಮೂರು ವರ್ಷ ಕಳೆದಿದ್ದು, ಈ ಅಂತರದಲ್ಲಿ ಸಿನಿಮಾ ಕುರಿತು ಮತ್ತಷ್ಟು ಕಲಿಕೆಗಳಿಗೆ ತೆರೆದುಕೊಂಡಿರುವುದಾಗಿ ಹೇಳುತ್ತಾರೆ. ‘ಅಪ್ಪ ಅಮ್ಮ ಕಲಾವಿದರಾಗಿದ್ದರೂ ನನಗೆ ನಟನೆ ಹೊಸತೇ ಆಗಿತ್ತು. ನನ್ನ ಮೊದಲ ಸಿನಿಮಾದ ಮೊದಲ ಶಾಟ್‌ನಲ್ಲಿ ಏನೋ ಒಂದು ರೀತಿ ಭಯ ಇತ್ತು. ಚೆನ್ನಾಗಿ ಮಾಡುತ್ತಿದ್ದೇನೊ, ಇಲ್ಲವೊ ಎಂಬ ಆತಂಕ, ಕುತೂಹಲ. ಆ ಆತಂಕ ಈಗಲೂ ಇದೆ. ಜನರಿಗೆ ಮನರಂಜನೆ ಒದಗಿಸಬೇಕೆಂಬ ಗುರಿ ಈ ಆತಂಕದ ಹಿಂದಿದೆ. ಹೀಗಾಗಿ ನನ್ನನ್ನು ನಾನು ಪಕ್ವವಾಗಿಸಿಕೊಳ್ಳಲು ಕೆಲಸ ಮಾಡುತ್ತಲೇ ಇರುತ್ತೇನೆ, ಪ್ರಯತ್ನಪಡುತ್ತಲೇ ಇರುತ್ತೇನೆ’ ಎಂದು ತಾವು ಮೊದಲು ಕ್ಯಾಮೆರಾ ಎದುರಿಸಿದ ಬಗೆಯನ್ನು ತೆರೆದಿಡುತ್ತಾರೆ.

ಸಿನಿಮಾ ರಂಗ ಪ್ರವೇಶ ಆಸಕ್ತಿಯಿಂದಾಯಿತು ಎನ್ನುವುದಕ್ಕಿಂತ, ಅವಕಾಶ ಸಿಕ್ಕಾಗ ಬಿಡಬಾರದೆಂಬ ಕಾರಣಕ್ಕೆ ಆಯಿತು ಎಂದು ಹೇಳುವ ಅವರು, ಅಪ್ಪ ಹೇಳಿದ ಮಾತನ್ನೇ ತಮ್ಮ ನಟನೆಗೆ ವೇದವಾಕ್ಯವಾಗಿಸಿಕೊಂಡಿದ್ದಾರೆ. ‘ನನ್ನ ಮುಂದೆ ನಟನೆಯ ಅವಕಾಶ ಬಂದು ಕುಳಿತಾಗ ಅಪ್ಪ ಹೇಳಿದ್ದು ಒಂದೇ ಮಾತು. ‘ಧೈರ್ಯವಾಗಿ ಆಕ್ಟ್ ಮಾಡು ಸಾಕು, ಅದೊಂದಿದ್ದರೆ ಎಲ್ಲಾ ಕಲೀತೀಯ. ಅದನ್ನು ಯಾರೂ ಹೇಳಿಕೊಡೋಕೆ ಆಗಲ್ಲ’ ಎಂದು. ಅದೇ ನನ್ನನ್ನು ಪ್ರೇರೇಪಿಸಿದ್ದು. ಅಲ್ಲಿಂದ ಇಲ್ಲೀವರೆಗೆ ಬಂದಿದ್ದೇನೆ. ಅಖಾಡಕ್ಕೆ ಇಳಿದ ಮೇಲೆ ಗೆಲ್ಲಲೇಬೇಕು ಎಂಬುದು ನನ್ನ ಉದ್ದೇಶ’ ಎಂದು ನಗುತ್ತಾರೆ ಅಭಿಷೇಕ್.

ಸಿನಿಮಾ ಸಂಖ್ಯೆಗಳ ಬಗ್ಗೆ ಹೆಚ್ಚು ಗಮನ ನೀಡದೇ, ತಮ್ಮ ಪಾತ್ರ ಪೋಷಣೆ ಬಗ್ಗೆ ಸಾಕಷ್ಟು ತಯಾರಿ ಮಾಡಿಕೊಳ್ಳುವುದು ಅವರ ಆದ್ಯತೆಯಾಗಿದೆಯಂತೆ. ‘ಸಿನಿಮಾ ಎನ್ನುವುದೇ ಬದ್ಧತೆ. ಪ್ರತಿಯೊಂದು ಪಾತ್ರಕ್ಕೂ ಅದರದ್ದೇ ಆದ ಸಿದ್ಧಾಂತವಿರುತ್ತದೆ. ಅದಕ್ಕೆ ನನ್ನಿಂದ ಭಂಗ ಬರಬಾರದು ಎಂಬುದು ನನ್ನ ಸಿದ್ಧಾಂತ. ಒಬ್ಬ ನಟನಿಂದ ನಿರ್ದೇಶಕ ಏನು ನಿರೀಕ್ಷೆ ಮಾಡುತ್ತಾನೆ, ಸಿನಿಮಾದಲ್ಲಿ ನನ್ನ ಪಾತ್ರ ಹೇಗಿದೆ? ಆ ಪಾತ್ರ ಏನು ಬೇಡುತ್ತದೆ ಎಂಬ ಕುರಿತು ಮೊದಲು ತಿಳಿದುಕೊಳ್ಳುತ್ತೇನೆ. ನಾನು ಆ ಪಾತ್ರವನ್ನು ಹೇಗೆ ನಿರ್ವಹಿಸಬಹುದು? ಆ ಪಾತ್ರಕ್ಕೆ ಹೇಗೆ ನನ್ನನ್ನು ನಾನು ಪಳಗಿಸಿಕೊಳ್ಳಬಹುದು, ಆ ಪಾತ್ರಕ್ಕೆ ಒಪ್ಪುವಂತೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹೇಗೆ ನನ್ನನ್ನು ನಾನು ಬದಲಿಸಿಕೊಳ್ಳಬಹುದು... ಹೀಗೆ ಸ್ವ ಪ್ರಶ್ನೆಗಳಿಗೆ ಸ್ಪಷ್ಟತೆ ದೊರೆತ ಮೇಲಷ್ಟೇ ಆ ಪಾತ್ರಕ್ಕೆ ಒಪ್ಪುತ್ತೇನೆ’ ಎಂದು ವಿವರಣೆ ನೀಡುತ್ತಾರೆ.

ಚಿತ್ರಕಥೆಯ ಬಗ್ಗೆ ಹಲವು ಆಯಾಮಗಳಲ್ಲಿ ಆಲೋಚಿಸುವುದು ಮುಖ್ಯ ಎನ್ನುವುದು